O.S.No.:06/2014
P.W.:1

ಈ ದಿನ ದಿಃ15.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸ್.ವಿ.ವಿ ವಕೀಲರಿಂದಃ</u>**

ನಾನು ಪ್ರತಿವಾದಿಯರ ವಿರುದ್ದ ದಾವೆ ಸಲ್ಲಿಸಿರುತ್ತೇನೆ. ಸರ್ವೆ ನಂ.104/10 ರಲ್ಲಿ ಕ್ಷೇತ್ರ 1 ಎಕರೆ 26 ಗುಂಟೆ ಕುರಿತಾಗಿ ದಾವೆ ಸಲ್ಲಿಸಿರುತ್ತೇನೆ. ದಾವೆ ಸಲ್ಲಿಸುವ ಕಾಲಕ್ಕೆ ದಾವಾಸ್ವತ್ತಿನ ವಿಸ್ತೀರ್ಣ 2 ಎಕರೆ 5 ಗುಂಟೆ ಇತ್ತು. ಪ್ರತಿವಾದಿಯರು ತೊಂದರೆ ಕೊಡುತ್ತಿದ್ದುದ್ದರಿಂದ ಅವರು ನಮಗೆ ತೊಂದರೆ ಕೊಡಬಾರದು ಎಂದು ಈ ದಾವೆ ಸಲ್ಲಿಸಿರುತ್ತೇನೆ. ದಾವಾಸ್ವತ್ತು 1 ಎಕರೆ 26 ವರೆ ಗುಂಟೆ ಸುತ್ತಮುತ್ತ ಪ್ರತಿವಾದಿಯರ ಜಮೀನುಗಳು ಇರುತ್ತವೆ. ಪ್ರತಿವಾದಿಯರು ದಾವಾಸ್ತಿಗೆ ಹೊಂದಿಕೊಂಡಂತೆ ಇರುವ ಬಗ್ಗೆ ಚಕ್ಕುಬಂದಿಯಲ್ಲಿ ನಮೂದಿಸಿರುತ್ತೇನೆ. ಸದರಿ ಪ್ರತಿವಾದಿಯರು ದಾವಾಸ್ವತ್ತಿಗೆ ಹೊಂದಿಕೊಂಡು ಇರುತ್ತಾರೆಂದು ಚಕ್ಕುಬಂದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ 2 ಎಕರೆ 5 ಗುಂಟೆಗೆ ತೋರಿಸಿದ ಚಕ್ಕುಬಂದಿಯನ್ನು 1 ಎಕರೆ 26 ವರೆ ಗುಂಟೆ ಗೂ ಸಹ ಅದೇ ಚಕ್ಕುಬಂದಿಯನ್ನು ತೋರಿಸಿರುತ್ತೇನೆ ಎಂದರೆ ಸರಿ.

ನಮ್ಮ ತಾತನ ಹೆಸರು ಪುಟ್ಟೇಗೌಡ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಶಿವನೇಗೌಡ ಎಂದು ಇರುತ್ತದೆ. ನನ್ನ ತಾತನ ಹೆಸರು ಶಿವನೇಗೌಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನಿಗೆ ನಾಲ್ಕು ಜನ ಮಕ್ಕಳಿದ್ದು ಅವರುಗಳೆಂದರೆ ಪುಟ್ಟೇಗೌಡ, ಕರಿಗೌಡ, ವೀರಭದ್ರೇಗೌಡ, ಮುನಿಗೌಡ ಎಂದು ಇರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ನನ್ನ ತಾತನ ಮರಣದ ನಂತರ ಸರ್ವೆ ನಂ.104/10 ನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಲ್ಲಿ ನನ್ನ ತಂದೆ ಪುಟ್ಟೇಗೌಡ ಇವರಿಗೆ 2 ಎಕರೆ 5 ಗುಂಟೆ, ಉಳಿದ ಮೂರು ಜನ ಸಹೋದರರಿಗೆ ತಲಾ 1 ಎಕರೆ 26 ಗುಂಟೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆಗೆ 2 ಎಕರೆ 5 ಗುಂಟೆ ಜಮೀನು

ಎರಡು ಕಡೆಗಳಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಂದೇ ಕಡೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಈಶಾನ್ಯ ದಿಕ್ಕಿಗೆ 1 ಎಕರೆ 5 ಗುಂಟೆ ಜಮೀನು ಬಂದಿದ್ದು, ಅದರ ಚಕ್ಕುಬಂದಿ ಪೂರ್ವಕ್ಕೆ ಕರಿಗೌಡ, ಪಶ್ಚಿಮಕ್ಕೆ ವೀರಭದ್ರೇಗೌಡ, ಉತ್ತರಕೆ ಮುನಿಗೌಡ ದಕ್ಷಿಣಕ್ಕೆ ಪುಟ್ಟೇಗೌಡ ಇವರುಗಳು ಇರುತ್ತಾರೆ ಎಂದರೆ ಸಾಕ್ಷಿಯು ಉತ್ತರಕ್ಕೆ ಮುನಿಗೌಡ ಇರುವುದಿಲ್ಲ, ಉಳಿದ ಚಕ್ಕುಬಂದಿ ಸರಿಯಿರುತ್ತದೆ. ನನ್ನ ತಂದೆಯ ಭಾಗಕ್ಕೆ ಬಂದ 1 ಎಕರೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಪಚ್ಚೇಗೌಡ, ಪಶ್ಚಿಮಕ್ಕೆ ಮುನಿಗೌಡ , ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಕರಿಗೌಡ ಇವರ ಜಮೀನುಗಳು ಇವೆ ಎಂದರೆ ಸಾಕ್ಷಿಯು ಸದರಿ ಚಕ್ಕುಬಂದಿಯಲ್ಲಿ ಪಶ್ಚಿಮಕ್ಕೆ ಮುನಿಗೌಡ ಇಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.104/10 ರಲ್ಲಿ ರಸ್ತೆ ಹಾಯ್ದು ಹೋಗಿರುತ್ತದೆ ಎಂದರೆ ಸರಿ. ದಾವಾಸರ್ವೆ ನಂಬರಿನ ಈಶಾನ್ಯ ದಿಕ್ಕಿಗೆ ಶಾಲೆ ಇದೆ ಎಂದರೆ ಸರಿ. ಸದರಿ 2 ಎಕರೆ 5 ಗುಂಟೆಯನ್ನು ನಾನು, ನನ್ನ ತಾಯಿ ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ದಾವೆಯಲ್ಲಿ ನನ್ನ ಸಹೋದರ ಮತ್ತು ಸಹೋದರಿಯನ್ನು ಪಕ್ಷಕಾರನ್ನಾಗಿ ಮಾಡಿರುವುದಿಲ್ಲ, ಅವರ ಪರವಾಗಿ ನಾನೇ ಸಾಕ್ಷಿ ನುಡಿಯುತ್ತೇನೆಂದು ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ನಾವು ದಾವಾ ಸರ್ವೆ ನಂಬರಿನಲ್ಲಿ ಕೆಲವು ಕ್ಷೇತ್ರ ಜಮೀನು ಮಾರಾಟ ಮಾಡಿದ ಬಗ್ಗೆ ನಮೂದಿಸಿದ್ದರಿಂದ ದಾವಾಸ್ವತ್ತಿನ ಕ್ಷೇತ್ರವನ್ನು ತಿದ್ದುಪಡಿ ಮೂಲಕ 2 ಎಕರೆ 5 ಗುಂಟೆಯಿಂದ 1 ಎಕರೆ 26 ವರೆ ಗುಂಟೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

ನನ್ನ ತಾಯಿಯ ಹೆಸರಿಗೆ ಇರುವ 30 ಗುಂಟೆ ಜಮೀನಿನ ಪೈಕಿ 13 ಗುಂಟೆ ಜಮೀನನ್ನು ಮುನಿಗೌಡ ಇವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ

ಕ್ರಯಪತ್ರಗಳಿಗೆ ನಾನು ಮತ್ತು ನಮ್ಮ ಕುಟುಂಬದವರು ಸಾಕ್ಷಿದಾರರೆಂದು ಸಹಿ ಹಾಕಿರುತ್ತೇವೆ ಎಂದರೆ ಸರಿ. ಕೆಂಚೇಗೌಡ ಇವರಿಗೆ ದಾವಾಸರ್ವೆ ನಂಬರ್ ನಲ್ಲಿ 5 ವರೆ ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ.

ದಾವಾಸರ್ವೆ ನಂಬರ್ ನಲ್ಲಿ ನಮ್ಮ ಭಾಗಕ್ಕೆ ಬಂದ ಜಮೀನಿನಲ್ಲಿ ರಸ್ತೆ ಮತ್ತು ಶಾಲೆಗೆ ಜಮೀನು ಹೋಗಿರುತ್ತದೆ ಎಂದರೆ ಸಾಕ್ಷಿಯು ಜೇಷ್ಟ ಪಾಲಿನಲ್ಲಿ ರಸ್ತೆ ಮತ್ತು ಶಾಲೆಗೆ ಜಮೀನು ಹೋಗಿರುತ್ತದೆ ಎಂದು ನುಡಿಯುತ್ತಾರೆ. ರಸ್ತೆ ಮತ್ತು ಶಾಲೆಗೆ ಕ್ಷೇತ್ರ ಹೋಗಿದ್ದರಿಂದ ಈಗ ಪ್ರಸ್ತುತ 1 ಎಕರೆ 26 ಗುಂಟೆ ಇರದೆ ಅಂದಾಜು 30 ಗುಂಟೆಯಷ್ಟು ಮಾತ್ರ ಉಳಿದಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ತಂದೆಯ ಭಾಗಕ್ಕೆ ಬಂದಿರುವ 1 ಎಕರೆ ಜಮೀನಿನ ಉತ್ತರಕ್ಕೆ ಮತ್ತು 1 ಎಕರೆ 5 ಗುಂಟೆ ಜಮೀನಿನ ಪೂರ್ವಕ್ಕೆ ಪ್ರತಿವಾದಿಯ ಜಮೀನು ಇರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾಸರ್ವೆ ನಂಬರ್ ನಲ್ಲಿ 20.05.1976 ರಂದು ದುಂಡಮಾದೇಗೌಡ ಇವರಿಗೆ ಇದೇ ಸರ್ವೆ ನಂಬರಿನ ಚಕ್ಕುಬಂದಿ ನಮೂದಿಸಿ ಸರ್ವೆ ನಂ.103 ಎಂದು ತಪ್ಪಾಗಿ ನಮೂದಿಸಿ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಸರಿ ಮಾಡಿಕೊಡುತ್ತೇವೆಂದು ಹೇಳಿರುತ್ತೇವೆಂದು ನುಡಿಯುತ್ತಾರೆ. ಮಾರೇಗೌಡ ಇವರಿಗೆ ನನ್ನ ತಂದೆ 12 ಗುಂಟೆ ಜಮೀನನ್ನು ಸರ್ವೆ ನಂಬರ್ ತಪ್ಪಾಗಿ ನಮೂದಿಸಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

O.S.No.:06/2014
P.W.:1

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.